ತಕ್ಷಣ ಬಿಡುಗಡೆಗಾಗಿ

# ವಿಶ್ವ ಬ್ಯಾಂಕ್

ಪತ್ರಿಕಾ ಹೇಳಿಕೆ ಸಂ. 2006//SAR

ಸಂಪರ್ಕಗಳು:
ದೆಹಲಿಯಲ್ಲಿ
ಸುದಿಪ್ ಮೊಜುಂದಾರ್
(91 11) 2461–7241
smozumder@worldbank.org
ವಾಷಿಂಗ್‌ಟನ್‌ನಲ್ಲಿ
ಎರಿಕ್ ನೋರಾ
(202) 458–4735
enora@worldbank.org

ಭಾರತದ ವಿದ್ಯುಚ್ಛಕ್ತಿ ವ್ಯವಸ್ಥೆಗೆ ವಿಶ್ವಬ್ಯಾಂಕ್‌ನ ಯುಎಸ್ $400 ಮಿಲಿಯಗಳ ಸಹಾಯ

ವಾಷಿಂಗ್‌ಟನ್, ಜನವರಿ 19, 2005– ವಿಶ್ವ ಬ್ಯಾಂಕ್ ಇಂದು ಭಾರತ ಸರಕಾರದ ಗ್ಯಾರಂಟಿ ಹೊಂದಿದ, ಭಾರತೀಯ ಪವರ್‌ಗ್ರಿಡ್ ಕಾರ್ಪೊರೇಷನ್‌ಗೆ, ಯುಎಸ್ $400 ಮಿಲಿಯಗಳ ಸಾಲಕ್ಕೆ ಮಂಜೂರಾತಿ ನೀಡಿತು. ಪವರ್ ಸಿಸ್ಟಮ್ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ಅನ್ನು ದೇಶದ ವಿವಿಧ ಭಾಗಗಳ ಹಾಗೂ ರಾಜ್ಯಗಳ ನಡುವೆ ಭರವಸೆದಾಯಕ ವಿದ್ಯುಚ್ಛಕ್ತಿ ವಿನಿಮಯವನ್ನು ಹೆಚ್ಚಿಸುವ ಸಲುವಾಗಿ ಭಾರತದ ವಿದ್ಯುಚ್ಛಕ್ತಿ ಸಂಪ್ರೇಷಣ ವ್ಯವಸ್ಥೆಯನ್ನು ಬಲಗೊಳಿಸುವಂತೆ ವಿನ್ಯಾಸಗೊಳಿಸಲಾಗಿದೆ.

ಭಾರತ ಸರಕಾರವು ತನ್ನ ಧ್ಯೇಯಗಳಾದ ಉನ್ನತ ಮಟ್ಟದ ಹಾಗೂ ದೃಢವಾದ ಆರ್ಥಿಕ ಬೆಳವಣಿಗೆ ಹಾಗೂ ಬಡತನ ನಿವಾರಣೆಗಳನ್ನು ಸಾಧಿಸಬೇಕಾದರೆ, ವಿದ್ಯುಚ್ಛಕ್ತಿ ಕ್ಷೇತ್ರವನ್ನು ಬಲಪಡಿಸಬೇಕೆಂಬುದನ್ನು ಕಂಡುಕೊಂಡಿದೆ. ಆದರೂ, ಅಧಿಕ ಬೇಡಿಕೆಯ ಸಮಯಗಳಲ್ಲಿ ವಿದ್ಯುಚ್ಛಕ್ತಿ ಕೊರತೆಯು ಶೇಕಡ 12.1ರಷ್ಟಿದ್ದು, ಈ ಗುರಿಗಳನ್ನು ಸಾಧಿಸಲು ವಿದ್ಯುಚ್ಛಕ್ತಿ ಕ್ಷೇತ್ರವು ಸದ್ಯದಲ್ಲಿ ಸೂಕ್ತ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿದೆ. ಇಷ್ಟಲ್ಲದೆ, 2012ರೊಳಗೆ ವಿದ್ಯುಚ್ಛಕ್ತಿ ಜಾಗತೀಕರಣದ ಗುರಿಯನ್ನು ಸಾಧಿಸಬೇಕಾದರೆ, ವಿದ್ಯುಚ್ಛಕ್ತಿ ಉತ್ಪಾದನೆ, ಸಂಪ್ರೇಷಣೆ ಹಾಗೂ ವಿತರಣೆಯಲ್ಲಿ ಸಾಕಷ್ಟು ಹೆಚ್ಚಳ ಸಾಧಿಸಬೇಕಾದುದು ಅನಿವಾರ್ಯ.

“ಭಾರತದ ಆರ್ಥಿಕತೆಗೆ ಬಹಳಷ್ಟು ನಷ್ಟವಾಗಿ ಪರಿಣಮಿಸುವಂತಹ ವಿದ್ಯುಚ್ಛಕ್ತಿ ಕೊರತೆಯನ್ನು ಭಾರತವು ಎದುರಿಸುತ್ತಿದೆ. ಆದರಿಂದಾಗಿ ಕೈಗಾರಿಕೆ ಹಾಗೂ ಆರ್ಥಿಕತೆಗಳ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ, ವ್ಯವಹಾರಗಳ ವೆಚ್ಚದಲ್ಲಿ ಹೆಚ್ಚಳವುಂಟಾಗುತ್ತದೆ, ಹಾಗೂ ಉತ್ಪಾದಕತೆಯನ್ನು ಕುಗ್ಗಿಸುತ್ತದೆ,” ಎನ್ನುತ್ತಾರೆ, ಮೈಕೆಲ್ ಕಾರ್ಟರ್, ಭಾರತದಲ್ಲಿರುವ ವಿಶ್ವ ಬ್ಯಾಕ್‌ನ ಕಂಟ್ರೀ ಡೈರೆಕ್ಟರ್. “ಈ ಸುಧಾರಣೆಯ ಕಾರ್ಯಸೂಚಿ ಕ್ಲಿಷ್ಟಕರವಾದುದು; ಆದರೆ ಪ್ರಗತಿ ಸುಮಾರಾಗಿದೆ, ಈ ಯೋಜನೆ ದೇಶದಾದ್ಯಂತ ವಿದ್ಯುತ್ ಸಂಪನ್ಮೂಲಗಳ ಸೂಕ್ತ ಬಳಕೆಯ ಗುರಿಯನ್ನು ಕಾರ್ಯಗತಗೊಳಿಸುವುದಕ್ಕೆ ಸಹಕಾರಿಯಾಗಬಹುದು.

ಈ ಯೋಜನೆಯು ವಿದ್ಯಚ್ಛಕ್ತಿಯ ಕೊರತೆ ಎದುರಿಸುತ್ತಿರುವ ಪ್ರದೇಶಗಳ ಸಂಪ್ರೇಷಣಾ ವ್ಯವಸ್ಥೆಯನ್ನು ಬಲಪಡಿಸುವುದರ ಮೂಲಕ ಹಾಗೂ ಅಂತರ್–ಪ್ರಾದೇಶಿಕ ಸಂಪ್ರೇಷಣಾ ಸಾಮರ್ಥ್ಯವನ್ನು ಹೆಚ್ಚಿಸುವುದರ ಮೂಲಕ ಭಾರತೀಯ ಪವರ್ ಗ್ರಿಡ್ ಕಾರ್ಪೊರೇಷನ್‌ನ ಸೇವಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ; ಹಾಗೂ ಸಾಂಸ್ಥಿಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದರ ಮೂಲಕ ಮುಕ್ತ ಲಭ್ಯತೆ ಹಾಗು ಅಂತರ್–ಪ್ರಾದೇಶಿಕ ವ್ಯವಹಾರಗಳನ್ನು ಸಾಧ್ಯವಾಗಿಸುತ್ತದೆ.

“ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳು ಹಾಗೂ ಬಳಕೆಯ ಕೇಂದ್ರಗಳ ನಡುವೆ ಹೆಚ್ಚಿನ ಅಂತರವಿರುವುದರಿಂದ ವಿದ್ಯುಚ್ಛಕ್ತಿಯನ್ನು ದೇಶಾದ್ಯಂತ ಸಂಪ್ರೇಷಣೆ ಮಾಡುವ ಹಾಗೂ ಅದಕ್ಕಾಗಿ ಉತ್ತಮ ಸಂಪ್ರೇಷಣಾ ವ್ಯವಸ್ಥೆಯನ್ನು ಹೊಂದುವ ಅಗತ್ಯವಿದೆ,” ಎನ್ನುತ್ತಾರೆ ಸುನಿಲ್ ಖೋಸ್ಲ, ಈ ಯೋಜನೆಯ ಟಾಸ್ಕ್ ಟೀಮ್ ಲೀಡರ್ ಹಾಗೂ ವಿಶ್ವ ಬ್ಯಾಂಕ್‌ನ ಸೀನಿಯರ್ ಎನರ್ಜಿ ಸ್ಪೆಶಲಿಸ್ಟ್. “ಈ ಯೋಜನೆಯು ಗ್ರಿಡ್ ಇಂಟಗ್ರೇಶನ್‌ನ ಮಟ್ಟವನ್ನು ಹೆಚ್ಚಿಸುತ್ತದೆ ಹಾಗೂ ಸಂಪ್ರೇಷಣಾ ಜಾಲವನ್ನು ಬಲಪಡಿಸುತ್ತದೆ.”

ಈ ಯೋಜನೆಯ ಅಭಿವೃದ್ಧಿ ಉದ್ದೇಶಗಳನ್ನು ಸಾಧಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗಳನ್ನು ಅಳೆಯಲು ವಿವಿಧ ಪ್ರದೇಶಗಳ ನಡುವಿನ ವಿದ್ಯಚ್ಛಕ್ತಿ ವಿನಿಮಯಗಳಲ್ಲಿನ ಹೆಚ್ಚಳವನ್ನು ಪ್ರಧಾನ ಸೂಚಕವನ್ನಾಗಿ ಬಳಸಲಾಗುತ್ತದೆ.

ಭಾರತದ ವಿದ್ಯುಚ್ಛಕ್ತಿ ಸಂಪ್ರೇಷಣಾ ಕ್ಷೇತ್ರದ ಸುಧಾರಣೆಯಲ್ಲಿ, ಅದರಲ್ಲೂ ಪ್ರತ್ಯೇಕವಾಗಿ ಭಾರತೀಯ ಪವರ್ ಗ್ರಿಡ್ ಕಾರ್ಪೊರೇಷನ್‌ನ ರಚನೆ ಹಾಗೂ ಅಭಿವೃದ್ಧಿಯಲ್ಲಿ ವಿಶ್ವ ಬ್ಯಾಂಕ್ ಸಕ್ರಿಯ ಪಾತ್ರವನ್ನು ವಹಿಸಿದೆ. ಕಳೆದೊಂದು ದಶಕದಿಂದಲೂ, ವಿಶ್ವ ಬ್ಯಾಕ್ ಕೇಂದ್ರ ಸರಕಾರದ ಅಧೀನ ಸಂಸ್ಥೆಗಳಿಗೆ ವಿದ್ಯುಚ್ಛಕ್ತಿ ಉತ್ಪಾದನೆ, ಸಂಪ್ರೇಷಣೆ ಹಾಗೂ ಅಸಾಂಪ್ರದಾಯಕ ಮೂಲಗಳಲ್ಲಿ ಹೂಡಿಕೆಗಳಿಗೆ, ಹಾಗೂ ಕೆಲವು ಆಯ್ದ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗಳಿಗೆ (ಎಸ್‌ಇಬಿಗಳು) ಕ್ಷೇತ್ರೀಯ ಸುಧಾರಣೆಗಳಿಗೆ ಸಂಬಂಧಿಸಿದ ಹೂಡಿಕೆಗಳಿಗಾಗಿ ಸಹಾಯವನ್ನು ಒದಗಿಸಿದೆ.

ವಿಶ್ವ ಬ್ಯಾಂಕ್‌ನ ಸಾಲ ನೀಡಿಕೆ ಅಂಗಸಂಸ್ಥೆಯಾದ ಅಂತಾರಾಷ್ಟ್ರೀಯ ಪುನರ್‌ನಿರ್ಮಾಣ ಹಾಗೂ ಅಭಿವೃದ್ಧಿ ಬ್ಯಾಂಕ್ (ಐಬಿಆರ್‌ಡಿ), ನೀಡುವ ಈ ಸಾಲವು 20 ವರ್ಷಗಳ ಮರುಪಾವತಿ ಅವಧಿ ಹೊಂದಿರುವ ವೇರಿಯೇಬಲ್–ಸ್ಪ್ರೆಡ್ ಸಾಲವಾಗಿದ್ದು, 5 ವರ್ಷಗಳ ರಿಯಾಯಿತಿ ಅವಧಿಯನ್ನು ಕೂಡ ಹೊಂದಿದೆ.

ಭಾರತದಲ್ಲಿ ವಿಶ್ವ ಬ್ಯಾಂಕ್‌ನ ಚಟುವಟಿಕೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಭೇಟಿನೀಡಿ: www.worldbank.org/in

ಯೋಜನೆಯ ಮಾಹಿತಿಗಳಿಗೆ, ಭೇಟಿನೀಡಿ:
http://www.worldbank.org.in/external/default/main?pagePK=64027221&piPK=64027220&theSitePK=295584&menuPK=295617&Projectid=P086414